ವಸತಿ ರಹಿತ ಮತ್ತು ನಿವೇಶನ ರಹಿತ ಫಲಾನುಭವಿಗಳಿಗೆ ನಿವೇಶನಗಳ ಹಂಚಿಕೆ

103 - ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಸತಿ ರಹಿತ ಮತ್ತು ನಿವೇಶನ ರಹಿತ ಫಲಾನುಭವಿಗಳಿಗೆ ಮನೆ ಮತ್ತು ನಿವೇಶನಗಳನ್ನು ಹಂಚಲು ಯಾವ ಆಧಾರದ ಮೇರೆಗೆ ಗುರುತಿಸಲಾಗುವುದು?

ಆ) ಗ್ರಾಮೀಣ ಪ್ರದೇಶದಲ್ಲಿ ವಸತಿ ರಹಿತ ಮತ್ತು ನಿವೇಶನ ರಹಿತ ಜನರನ್ನು ಗುರುತಿಸಲು ಗ್ರಾಮ ಸಭೆಯನ್ನು ನೇಮಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸುತ್ತೋಲೆಗಳನ್ನು ಮತ್ತು ಸರ್ಕಾರಿ ಆದೇಶಗಳನ್ನು ಹೊರಡಿಸಲಾಗಿದೆಯೇ?

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) 1995ರ ಮೇ ತಿಂಗಳಲ್ಲಿ ಸರ್ಕಾರ ನಿವೇಶನ ಹಾಗೂ ಮನೆ ರಹಿತರ ಸರ್ವೇಕ್ಷಣೆ ನಡೆಸಿದ್ದು, ಅದನ್ನು ಆದರಿಸಿ ವಸತಿ ರಹಿತ ಮತ್ತು ನಿವೇಶನ ರಹಿತ ಫಲಾನುಭವಿಗಳಿಗೆ ವಸತಿ ನಿವೇಶನವನ್ನು ನೀಡುವಾಗ ಫಲಾನುಭವಿಗಳು ಆರ್ಥಿಕವಾಗಿ ಹಿಂದುಳಿದಿರಬೇಕು. ವಾರ್ಷಿಕ ವರಮಾನ ರೂ. 11,800ಕ್ಕೆ ಮೀರಬಾರದು ವಸತಿ ಮತ್ತು ನಿವೇಶನ ರಹಿತರಾಗಿರಬೇಕು.

ಆ) ಗ್ರಾಮ ಪಂಚಾಯತಿಯು ಆಯಾ ಗ್ರಾಮ ಸಭೆಗಳಲ್ಲಿ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ತಯಾರು ಮಾಡಿ ತಾಲ್ಲೂಕು ಪಂಚಾಯತಿಗೆ ನಿವೇಶನ : ಮನೆ ಮಂಜೂರಾತಿಗೆ ಶಿಫಾರಸ್ಸು ಮಾಡಬೇಕು.

ಇ) ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993 ರಡಿ ಸೆಕ್ಷನ್ ನಂ. 3,58,145 (ಶೆಡ್ಯೂಲ್ 1 ಮತ್ತು 2)ರಲ್ಲಿ ತಿಳಿಸಿರುವಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ಹೆಚಯುಡಿ 1 ಹೆಚಎಹೆಚ್ 95 ದಿನಾಂಕ: 18-3-96ರ ಆದೇಶಗಳನ್ನು ಆದರಿಸಿ ಫಲಾನುಭವಿಗಳ ಆಯ್ಕೆ ಮಾಡಿ ಸೈಟ: ಮನೆ ಕೊಡಲಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಕೇಳಿದ್ದು ಏನೆಂದರೆ on what basis the houseless and siteless beneficiaries are identified for distribution of sites and houses, ತಾವು ಹೇಳಿದ್ದುದು 1995 ರಲ್ಲಿ ಏನು ಸರ್ವೇ ಕಂಡಕ್ಟ ಮಾಡಿದ್ದೇವೆ ಅದರ ಆಧಾರದ ಮೇಲೆ ನಾವು ಮನೆ ಹಂಚಿಕೆ ಮಾಡುತ್ತಿದ್ದೇವೆ ಎನ್ನತಕ್ಕಂಥದ್ದನ್ನು ಹೇಳಿದಿರಿ. ಇದರ ಹಿಂದೆಯೂ ಕೂಡ ಗ್ರಾಮ ಸಭೆಗಳನ್ನು ಮಾಡಿ ಬೆನಿಷಿಷಿಯರೀಸನ್ನು ಐಡೆಂಟಿಫೈ ಮಾಡಿದ್ದಾರೆ. ಮತ್ತು ಈಗಲೂ ಕೂಡ ಗ್ರಾಮ ಸಭೆಗಳನ್ನು ಮಾಡಿ ಬೆನಿಫಿಷಿಯರೀಸ್‌ನ್ನು ಐಡೆಂಟಿಫೈ ಮಾಡಿದ್ದಾರೆ, ಮಾಡಿದರೂ ಕೂಡ ಅಲ್ಲಿ ಸ್ಥಳದಲ್ಲಿರತಕ್ಕಂಥ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಲಿ, ಜಿಲ್ಲಾ ಪಂಚಾಯಿತಿಯವರಾಗಲಿ ತಮಗೆ ಇಚ್ಛೆ ಬಂದಂತಹವರಿಗೆ ಬೇಕಾದಂತಹ ಹೆಸರು ಇಲ್ಲ ಎಂದಾಗ ಪುನಃ ಅಧಿಕಾರಿಗಳನ್ನು ಕಳುಹಿಸಿ

ಎರಡನೇ ಲಿಸ್ಟ್ ಮಾಡಿಕೊಂಡು ಬಂದು ತಮಗೆ ಯಾರು ಬೇಕು ಅವರಿಗೆ ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತಿದ್ದಾರೆ. ಅದನ್ನು ಅವರ ಗಮನಕ್ಕೆ ನಾನು ತಂದೆ. ಆಗ 351 ರಲ್ಲಿ ಹೇಳಿದರು. 351 ರಲ್ಲಿ ಹೇಳಿದ ಮೇಲೆ ಕೂಡ ಪುನಃ ಇವತ್ತು ಅವರು ಅದೇ ರೀತಿಯಾಗಿ ಅಲ್ಲಿ ವರ್ತನೆ ಮಾಡುತ್ತಿದ್ದಾರೆ. ತಾವು ಏನು ಕ್ರಮ ಅವರ ಮೇಲೆ ತೆಗೆದುಕೊಳ್ಳುತ್ತೀರಿ, ಇದು ಒಂದು. ಎರಡನೆಯದು ಗ್ರಾಮ ಸಭೆಯಲ್ಲಿ ಮಾಡಿದಂತಹ ಲಿಸ್ಟ ಪ್ರಕಾರ ತಾವು ಕೊಡುತ್ತೀರೋ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೆ, ನಾನು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ, ಸರ್ವೇ ಮಾಡಿಸಿದ್ದೇನೆ, ಸರ್ವೇ ಮಾಡಿಸಿದ ಮೇಲೆ ಅದು ಕಾನೂನು ಪ್ರಕಾರ ಗ್ರಾಮ ಸಭೆಯಿಂದ ಅಪ್ರೂವ್ ಆಗಲೇಬೇಕು. ಗ್ರಾಮ ಸಭೆ ಫಲಾನುಭವಿಗಳನ್ನು ಅಪ್ರೂವ್ ಮಾಡಿದ ಮೇಲೆ ಆ ಫಲಾನುಭವಿಗಳಿಗೆ ಮಾತ್ರ ಮನೆ ಮತ್ತು ನಿವೇಶನ ಕೊಡುವುದಕ್ಕೆ ತಾಲ್ಲೂಕು ಪಂಚಾಯಿತಿಗೆ ಅಧಿಕಾರ ಇದೆ. ಗ್ರಾಮ ಸಭೆ ಈ ಫಲಾನುಭವಿಗಳನ್ನು ಅಪ್ರೂವ್ ಮಾಡದೇ ಇದ್ದರೆ ಅದನ್ನು ಆಯ್ಕೆ ಮಾಡುವುದಕ್ಕೆ ತಾಲ್ಲೂಕು ಪಂಚಾಯಿತಿಗೆ ಅಧಿಕಾರವಿಲ್ಲ. ಇಂತಹ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿಯವರು ಗ್ರಾಮ ಸಭೆ ಅಪ್ರೂವ್ ಮಾಡದೆ ಇರುವಂತಹ ಫಲಾನುಭವಿಗಳನ್ನು ಮಾಡಿದರೆ ಅದು ತಪ್ಪಾಗುತ್ತದೆ. ಮತ್ತು ಅಂತಹ ಉದಾಹರಣೆಗಳನ್ನು ಮಾನ್ಯಸದಸ್ಯರು ನನ್ನ ಗಮನಕ್ಕೆ ತಂದರೆ, ನೀವು ಯಾವುದೇ ಹೆಸರು ಹೇಳಲಿಲ್ಲ, ಈ ತರಹ ನಡೆದಿದೆ ಎಂದು ಹೇಳಿದಿರಿ, ಈ ತರಹ ನಡೆಯಬಾರದು ಎಂದು ನಾನು ಜಿಲ್ಲಾ ಪಂಚಾಯಿತಿ ಅಧಿಕಾರಿಗಳಿಗೆ ಹೇಳಿದ್ದೇನೆ. ಮಾನ್ಯ ಸದಸ್ಯರು ಆಯ್ಕೆಯಲ್ಲಿ ನಿರ್ದಿಷ್ಟವಾದ ಹೆಸರುಗಳನ್ನು ಹೇಳಿ, ಈ ತರಹ ಸರ್ವೇಯಲ್ಲಿ ಆಗಿಲ್ಲ, ಅವರಿಗೆ ಗ್ರಾಮ ಸಭೆ ಅಪ್ರೂವ್ ಮಾಡಿಲ್ಲ ಎಂದರೆ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದುದು ಏನೆಂದರೆ ಅವರ ಹೆಸರು ಇರಲಿಲ್ಲ ಎಂದರೆ ಪುನಃ ಎರಡನೇ ಸಾರಿ ಕಳುಹಿಸಿ ಅವರ ಹತ್ತಿರ ಹಣ ತೆಗೆದುಕೊಂಡು ಪುನಃ ಸೆಲೆಕ್ಟ್ ಮಾಡಿ ಅವರಿಗೆ ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತಿದ್ದಾರೆ ಎಂದು ಹೇಳಿ ಮೂರು ಮೂರು ಹೆಸರುಗಳು ಹಾಕಿ ನಾನು ಮೂರು ಸಾರಿ ಪತ್ರ ಬರೆದಿದ್ದೇನೆ. ಒಂದು ಸಾರಿ ಹೀಗೆ ಆಗಿದೆ ಎಂದು, ಎರಡನೇ ಸಲ ಇಂತಹ ಊರು ಎಂದು ಹೇಳಿ; ಮೂರನೇ ಸಲ 351 ರಲ್ಲಿ . ಉತ್ತರ ಹೇಳಿದ್ದೀರಿ ಇದು ಸರಿಯಲ್ಲ ಮತ್ತೆ ತಾವು ಸಂಬಂಧಪಟ್ಟ ಸಿ.ಎ.ಓ.ಗೆ ಹೇಳಿ ಎಂದು ಅದನ್ನೂ ಕೂಡ ಕಳುಹಿಸಿದ್ದೇನೆ. ಹೀಗೆ ನಾನು ಒಂದು ಸಲ, ಪ್ರಶ್ನೆ ಕೇಳಿ ಬಂದಿಲ್ಲ, ನಾನು ಒಂದೆರಡು ಸಲ ಪ್ರಯತ್ನ ಮಾಡಿದ ಮೇಲೆ ಈ ಪ್ರಶ್ನೆ ಕೇಳುತ್ತಿದ್ದೇನೆ. ಇದು ಒಂದು ಎರಡನೆಯದು, ಈಗ ಸಾಕಷ್ಟು ಉತ್ತರ ಕೊಟ್ಟರೂ ಬಹುಶಃ ಬಹಳ ಆಳವಾಗಿ ಸಾಕಷ್ಟು ಅಧ್ಯಯನ ಮಾಡಿ ಇಲ್ಲಿ ಬಂದು ಉತ್ತರ ಕೊಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ಅವರು ಹಿಂದಿನ ಸರ್ಕಾರ ಏನು ಮಾಡಿತ್ತು, ಈಗ ನು ಮಾಡಿತು ಎಂದು ವಿವರವಾಗಿ ಹೇಳುತ್ತಿದ್ದಾರೆ. ಆದರೆ ಒಂದು ಮಾತು ಈ ಒಂದು ಅಂಬೇಡ್ಕರ್ ಹೌಸಸ್ ಆಗಲಿ, ಅಥವಾ ಇಂದಿರಾ ಆವಾಸ್ ಆಗಲಿ ಅಥವಾ ಗೃಹ ನಿರ್ಮಾಣ

ಮಂಡಳಿಯವರಿಂದ ಕಟ್ಟಿಸಿಕೊಡತಕ್ಕಂಥ ಮನೆಗಳಾಗಲಿ, ಆಶ್ರಯ ಯೋಜನೆಯಾಗಲಿ, ಇವತ್ತು ಏನಾಗಿದೆ ಎಂದರೆ ಇವರೂ ಕೂಡ ಅನೇಕ ಸಾರಿ ಹೇಳಿದ್ದಾರೆ, ನಾವು ಮನೆಗಳನ್ನು ಬಹಳ ಬೇಗ ಕಟ್ಟಿಸಿ ಕೊಡುತ್ತೇವೆ ಮತ್ತು ನಾವು 1995-96ರಲ್ಲಿ ಹಾಕಿಕೊಂಡಂತಹ ಗುರಿ ಮಾರ್ಚ ಒಳಗೆ ಮುಗಿಸುತ್ತೇವೆ ಎನ್ನತಕ್ಕಂತಹ ಮಾತು ಒಂದು ತಿಂಗಳಿನಿಂದ ಹೇಳಿಕೊಂಡು ಅಂಕಿ ಸಂಖ್ಯೆ ಆಧಾರದ ಮೇಲೆ ಇವತ್ತಿನವರೆಗೆ ಜನವರಿ ಎಂಡವರೆಗೆ ತಾವು ಸ್ವಲ್ಪ ಗಮನಿಸಬೇಕು, ಅಂದರೆ ಈ ಪೇಪರನಲ್ಲಿ ಎನು ಬರುತ್ತದೆ, ಸ್ಟೇಟಮೆಂಟ್ ಏನು, ಇಲ್ಲಿ ಹೇಳುವುದು ಏನು ಎನ್ನುವುದಕ್ಕೆ ಸ್ವಲ್ಪ ತಾವು ಗಮನ ಕೊಟ್ಟರೆ ಇಡೀ ನಮ್ಮ ಸದನಕ್ಕೆ ಗೊತ್ತಾಗುತ್ತದೆ, ಎಷ್ಟರ ಮಟ್ಟಿಗೆ ಈ ಪ್ರೋಗ್ರಾಂ ಬಹಳ ತೀವ್ರಗತಿಯಲ್ಲಿ ನಡೆದಿದೆ ಇಲ್ಲ ಎನ್ನತಕ್ಕಂಥದ್ದು. ಈಗ ಡಾಧಅಂಬೇಡ್ಕರ್ ಜಯಂತಿ ಮನೆಗಳು 1994-95ರಲ್ಲಿ ವಾರ್ಷಿಕ ಗುರಿ ಇರತಕ್ಕಂಥದ್ದು 10,830, ಆಮೇಲೆ ಈಗ ಜನವರಿ ಅಂತ್ಯದ ಒಳಗೆ ಮಾಡತಕ್ಕಂಥದ್ದು ಗುರಿ ಇರತಕ್ಕಂಥದ್ದು 4,981. ಆದರೆ ಇವರು ಮಾಡಿದ್ದು 3.000 ಅಂದರೆ 76 ಪರ್ಸೆಂಟ ಅದರಲ್ಲಿ ಅಚೀವಮೆಂಟ್ ಆಗಿದೆ. ಇನ್ನೊಂದು ಡಾ॥ ಅಂಬೇಡ್ಕರ್ ಜಯಂತಿ ಮನೆಗಳು 1993-94ರಲ್ಲಿ ಇರತಕ್ಕಂತಹ ಗುರಿ 697. ಇವರು ಮಾಡಿದ್ದುದು 259, ಅಂದರೆ 37 ಪರ್ಸೆಂಟ್ ಮಾತ್ರ. ಆಮೇಲೆ ಅಂಬೇಡ್ಕರ್ ಜಯಂತಿ ಮನೆ 1995-96ರಲ್ಲಿ 25,000 ಗುರಿ ಇತ್ತು....

ಅಧ್ಯಕ್ಷರು : ನನ್ನ ಗತಿ ಏನು ಕ್ವೊಶ್ಚನ್ ಹವರ್ ನಡೆಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಕ್ವೊಶ್ಚನ್ ಹವರಗೆ ಅವರು 10 ನಿಮಿಷ ಉತ್ತರ ಹೇಳಿದರು. ನಾಲ್ಕು ಪರ್ಸೆಂಟ್ ಇದೆ. ನಾನು ಹೇಳುತ್ತಿದ್ದೇನೆ, ಏನೆಂದರೆ ನೀವು ಏನು ಹೇಳಿದಿರಿ 90 ಪರ್ಸೆಂಟ್ ಇನ್ನೊಬ್ಬರಿಗೆ, ಹಿಂದೆ ಸರ್ಕಾರ ಹೀಗೆ ಮಾಡಿತ್ತು, ಎಂದು ನಾನು ನಿಮ್ಮ ಸರ್ಕಾರ ನಿಮ್ಮ ಗುರಿ ನೀವು ಫಿಕ್ಸ ಮಾಡಿದಂತಹ ಏನು ಗುರಿ ಇದೆ, ಈ ವರ್ಷ 25,000 ಮನೆಗಳಿದ್ದರೆ 41 ಮಾತ್ರ ಕಂಪ್ಲೀಟ್ ಮಾಡಿದದಾರೆ, ಕೇವಲ ನಾಲ್ಕು ಪರ್ಸೆಂಟ್ ಮಾತ್ರ. ಇದೇ ರೀತಿಯಾಗಿ ನಾನು ಹೇಳಿಕೊಳ್ಳುತ್ತಾ ಹೋದರೆ ಎಲ್ಲಾ 47,42,22,27 ಪರ್ಸೆಂಟ್ ಈ ವರ್ಷದ ಅಂತ್ಯಕ್ಕೆ ಗುರಿ ಇಟ್ಟುಕೊಂಡಿದ್ದು 100 ಪರ್ಸೆಂಟ್ ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಹೇಳತಕ್ಕಂಥದ್ದು ಸುಲಭ, ಕನಿಷ್ಟ ಪಕ್ಷ ಈಗಲಾದರೂ ನೀವು ಏನು ಪೇಪರಿನಲ್ಲಿ ಸ್ಟೇಟಮೆಂಟ್ ಕೊಟ್ಟಿದ್ದೀರಿ ಅದರ ಪ್ರಕಾರ ಆದರೂ ಕಟ್ಟಿಸತಕ್ಕಂತಹ ವ್ಯವಸ್ಥೆ ಮಾಡುತ್ತೀರೋ ಹೇಗೆ , ಹಿಂದಿನ ಕತೆ ಹೇಳಬೇಡಿ. ನಿಮ್ಮ ಗುರಿ ಪ್ರಕಾರ ನೀವು ನಡೆದಿದ್ದೀರೋ ಇಲ್ಲವೋ ಎಂಬುದನ್ನು ಹೇಳಿ.

ಅಧ್ಯಕ್ಷರು : ನೀವಾದರು ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ : ಮೂರು ಯೋಜನೆಗಳಲ್ಲಿ ಒಟ್ಟು ಒಂದು ಲಕ್ಷ 26,000 ಮನೆಗಳನ್ನು ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಗಳಲ್ಲಿ ಮುಗಿಸಿದ್ದೇವೆ. ಈ ವರ್ಷ ಏನು ಒಂದು ಲಕ್ಷ 26,000 ಮನೆಗಳನ್ನು ಹಮ್ಮಿಕೊಂಡಿದ್ದೇವೆ, ಇದನ್ನು ಖಂಡಿತವಾಗಿ ಗುರಿ ಪ್ರಕಾರ ನಾವು ಪೂರ್ತಿಗೊಳಿಸುತ್ತೇವೆ. ಮಾನ್ಯ ಸದಸ್ಯರು ಹೇಳುವುದರಲ್ಲಿ ಸತ್ಯಾಂಶ ಇದೆ ನಾನು ಒಪ್ಪುತ್ತೇನೆ, ಪ್ರೊಗ್ರೆಸ್ ಸ್ವಲ್ಪ ನಿಧಾನವಾಗಿದೆ. ಆದರೆ ಹಣ ಬಿಡುಗಡೆಯಾಗಿದೆ. ಅಧ್ಯಕ್ಷರೆ, ಇಲ್ಲಿ ಏನಾಗಿದೆ, ನಾವು ಹಣ ಬಿಡುಗಡೆ ಮಾಡಿದ್ದೇವೆ. ಆದರೆ ಏಕೆ ಸ್ಲೋ ಪ್ರೊಗ್ರೆಸ್ ಎಂದರೆ ತಾಲ್ಲೂಕು ಪಂಚಾಯಿತಿಗೆ

ಅಧಿಕಾರ ಕೊಟ್ಟರು. ಹೋದ ಸಾರಿ ಪಂಚಾಯತ್‌ರಾಜ್ ಆಕ್ಟ್ ಪ್ರಕಾರ ಪಂಚಾಯತ್ ರಾಜ್ ತಾಲ್ಲೂಕು ಪಂಚಾಯಿತಿಯಲ್ಲಿ ಬೆನಿಫಿಷಿಯರೀಸ್ ಆಯ್ಕೆ ಮಾಡಬೇಕು. ಹೀಗಾಗಿ ಆಯ್ಕೆ ಮಾಡುವುದರಲ್ಲಿ ವಿಳಂಬವಾಯಿತು.

12.10 ಪಿ.ಎಂ.

ನಮ್ಮ ಪ್ರೋಗ್ರಾಮನ್ನು ನಾವು ಮೇ ತಿಂಗಳಲ್ಲಿ ಸರ್ವೆ ಮಾಡಿಸಿ ಅಕ್ಟೋಬರ್ ತಿಂಗಳಲ್ಲಿ ಲಾಂಚ್ ಮಾಡಿದ್ದೇವೆ. ಅಕ್ಟೋಬರ್ ತಿಂಗಳಲ್ಲಿ ಲಾಂಚ್ ಮಾಡಿದ ಮೇಲೆ ಬೆನಿಫಿಷಯರೀಸ್ ಸೆಲೆಕ್ಷನ್ ಆಯಿತು. ಈ ವರ್ಷ ಹೊಸ ಯೋಜನೆ ಮಾಡಿರುವುದರಿಂದ ಸ್ವಲ್ಪ ವಿಳಂಬವಾಗಿದೆ. ಮಳೆಗಾಲ ಬರುವುದರೊಳಗಾಗಿ ಸಂಪೂರ್ಣವಾಗಿ ಒಂದು ಲಕ್ಷ ಇಪ್ಪತ್ತಾರು ಸಾವಿರ ಮನೆಗಳನ್ನು ಈ ಸರ್ಕಾರ ಸಂಪೂರ್ಣಗೊಳಿಸುತ್ತದೆ, ಮತ್ತು ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ತಮ್ಮ ಮುಖಾಂತರ ಸ್ಪಷ್ಟಪಡಿಸುತ್ತೇನೆ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ಹಣಕಾಸಿನ ಮುಗ್ಗಟ್ಟು

104 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಲ್ಲಿ ಮೈಸೂರು ಮಹಾನಗರಪಾಲಿಕೆಗೆ ಸರ್ಕಾರ ಬಿಡುಗಡೆ ಮಾಡಿರುವ ಹಣದ ವಿವರಗಳೊನ್ನೊದಗಿಸುವುದು?

ಆ) ಈ ಹಣವನ್ನು ನಗರ ಪಾಲಿಕೆಯು ಯಾವ ಯಾವ ಬಾಬ್ತು ಎಷ್ಟೆಷ್ಟು ಖರ್ಚು ಮಾಡಿದ ವಿವರಗಳನ್ನೊದಗಿಸುವುದು?

ಇ) ಮೈಸೂರು ನಗರ ಪಾಲಿಕೆಯಲ್ಲಿ ಹಣಕಾಸಿನ ಮುಗ್ಗಟ್ಟಿನಿಂದ ಅಭಿವೃದ್ಧಿ ಕಾರ್ಯಗಳು ಸಮರ್ಪಕ ರೀತಿಯಲ್ಲಿ ಆಗದೇ ಇರುವುದು ಸರ್ಕಾರಕ್ಕೆ ತಿಳಿದಿದೆಯೇ?

ಈ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳಾವುವು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ)		ರೂ. ಲಕ್ಷಗಳಲ್ಲಿ
1)	ಜಕಾತಿ ಅನುದಾನ	473.88
2)	ಮನರಂಜನಾ ತೆರಿಗೆ ಮತ್ತು ಸರಭಾರ್ಜಿದಿ	210.15
3)	(ವಾಣಿಜ್ಯ ತೆರಿಗೆ ಇಲಾಖೆ ಮೂಲಕ) ಆಸ್ತಿ ಮಾರಾಟ ತೆರಿಗೆಯಿಂದ ಬರುವ ಉತ್ಪತ್ತಿ (ಜಿಲ್ಲಾ ನೊಂದಣಾಧಿಕಾರಿಗಳ ಮೂಲಕ)	98.66
4)	ಮೋಟಾರು ವಾಹನ ತೆರಿಗೆಗಳಿಂದ ಬರುವ ಉತ್ಪತ್ತಿ	32.20
	ಒಟ್ಟು	**814.89**